**ಪಿಡಬ್ಲೂ -1**

**ಗೌರವಾನ್ವಿತ 3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಬೆಳಗಾವಿ.**

**ದಿಃ 10-04-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀಮತಿ ಎಸ್ ಎ ಎಸ್ ವಕೀಲರಿಂದ.**

ದಿನಾಂಕ 01-02-1994 ರ ಖರೀದಿ ಕರಾರು ಪತ್ರವನ್ನು ಹಾಗೂ ಅದರ ಅನುವಾದ ನಕಲನ್ನು ಹಾಜರುಪಡಿಸಿದ್ದು ಅದನ್ನು ಪ್ರತಿವಾದಿಯರ ತಕರಾರಿಗೆ ಒಳಪಡಿಸಿ ಅದನ್ನು ನಿಪಿ-1 ಮತ್ತು 1(ಎ) ಎಂದು ಗುರುತಿಸಲಾಯಿತು. ನಿಶಾನೆ ಪಿ-1 ನ್ನು ಜ್ಯೋತಿಬಾ ಪಾಟೀಲ್ ಹಾಗೂ ಪ್ರತಿವಾದಿ 2 ರಿಂದ 7 ನೆಯವರು ಮಾಡಿಕೊಟ್ಟಿರುತ್ತಾರೆ, ಸಾಕ್ಷಿಯು ಅವರ ಸಹಿಗಳನ್ನು ನೋಡಿ ಗುರುತಿಸಿದ ಕಾರಣ ಸದರಿ ಸಹಿಗಳನ್ನು ನಿಶಾನೆ ಪಿ-1 (ಬಿ) ರಿಂದ (ಹೆಚ್) ಎಂದು ಗುರುತಿಸಲಾಯಿತು. ಸದರಿ ನಿಶಾನೆ ಪಿ-1 ಕ್ಕೆ ಸಾಕ್ಷಿದಾರರಾಗಿ ಎಂ.ಜಿ.ಕಾವಲೇಕರ್ ಮತ್ತು ಎನ್.ಬಿ.ಸಿಂಧೆ ಸಹಿ ಮಾಡಿರುತ್ತಾರೆ, ಸಾಕ್ಷಿಯು ಸದರಿಯವರ ಸಹಿಗಳನ್ನು ನೋಡಿ ಗುರುತಿಸಿದ ಕಾರಣ ಅವುಗಳನ್ನು ನಿಶಾನೆ ಪಿ-1 (ಐ) ಮತ್ತು (ಜೆ) ಎಂದು ಗುರುತಿಸಲಾಯಿತು. ನಿಶಾನೆ ಪಿ-1 ನ್ನು ಕಾಗವಾಡ್ ಎಂಬುವವರು ತಯಾರಿಸಿರುತ್ತಾರೆ. ಸಾಕ್ಷಿಯು ಅವರ ಸಹಿಯನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಶಾನೆ ಪಿ-1 (ಕೆ) ಎಂದು ಗುರುತಿಸಲಾಯಿತು. ದಿನಾಂಕ 13-07-2014 ರ ತರುಣ ಭಾರತ ದಿನಪತ್ರಿಕೆಯನ್ನು ಹಾಜರು ಪಡಿಸಿದ್ದು ಅದನ್ನು ನಿಶಾನೆ ಪಿ-2 ಎಂದು, ದಿನಾಂಕ 13-08-2014 ರ ತರುಣ ಭಾರತ ದಿನಪತ್ರಿಕೆಯನ್ನು ಹಾಜರು ಪಡಿಸಿದ್ದು ಅದನ್ನು ನಿಶಾನೆ ಪಿ-3 ಎಂದು, ದಿನಾಂಕ 22-08-2014 ರ ನೋಟಿಸ್ ನ ಕಛೇರಿ ಪ್ರತಿಯನ್ನು ದಿನಾಂಕ 13-07-2014 ರ ತರುಣ ಭಾರತ ದಿನಪತ್ರಿಕೆಯನ್ನು ಹಾಜರು ಪಡಿಸಿದ್ದು ಅದನ್ನು ನಿಶಾನೆ ಪಿ-4 ಎಂದು, 7 ಅಂಚೆ ರಶೀದಿಗಳನ್ನು ಹಾಗೂ 7 ಅಂಚೆ ಲಕೋಟೆಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಶಾನೆ ಪಿ-5 ರಿಂದ 18 ಎಂದು, ಶಹಪುರ್ ಗ್ರಾಮದ ಸರ್ವೆ ನಂಬರ್ 193/2 ರ

ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿದ್ದು ಅದನ್ನು ನಿಶಾನೆ ಪಿ-19 ಎಂದು ಗುರುತಿಸಲಾಯಿತು.

ಪ್ರತಿವಾದಿಯ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದು ನೀಡಲಾಯಿತು.

**(ಸಾಕ್ಷಿಯ ಹೇಳಿಕೆಯನ್ನು ತೆ.ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿಯಿದೆ.**

**ಸಹಿ/-**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**

**ಬೆಳಗಾವಿ.**